ದಿನಾಂಕ **:20.04.2024** ರಂದು ಪಿಡಬ್ಲ್ಯು - 1 ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು.

<u>**ಪಾಟೀ ಸವಾಲುಃ**</u> ಶ್ರೀಮತಿ ಬಿ.ಎನ್ 2 ನೇ ಎದುರುದಾರರ ಪರ ವಕೀಲರಿಂದಃ

ಅಪಘಾತವಾದ ದಿನ ನಾನು ಮಾರುತಿ ಸುಜುಕಿ ವಾಹನ ಸಂಖ್ಯೆ ಕೆ.ಎ.16 ಎಮ್.8601 ಯನ್ನು ಚಲಾಯಿಸುತ್ತಿದ್ದೆ. ಅಪಘಾತವಾದ ಸಮಯದಲ್ಲಿ ನನ್ನ ಬಳಿ ವಾಹನ ಚಲಾಯಿಸಲು ಡಿಎಲ್ ಇರಲಿಲ್ಲ. ಸದರಿ ವಾಹನವು ಪಂಚಾಯತಿಯ ಸುಪರ್ದಿಗೆ ಅಂಬ್ಯುಲೆನ್ಸ್ ಆಗಿ ಉಪಯೋಗಿಸಲು ಸಾರ್ವಜನಿಕರು ನೀಡಿದಂತಹ ವಾಹನವಾಗಿರುತ್ತದೆ. ವಾಹನದ ಮಾಲೀಕರಿಗೆ ಅಂಬ್ಯುಲೆನ್ಸ್ ಆಗಿ ಉಪಯೋಗಿಸಲು ಪಂಚಾಯತಿಯವರು ಪರವಾನಿಗೆ ನೀಡಿದ್ದಾರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಸದರಿ ವಾಹನದ ಮಾಲೀಕರು ಯಾರು ಎಂದು ನನಗೆ ಗೊತ್ತಿಲ್ಲ. ಪಂಚಾಯತಿಯವರು ಕರೆಯುತ್ತಿದ್ದು, ನಾನು ಚಾಲನೆಗಾಗಿ ಹೋಗುತ್ತಿದ್ದೆ. ಟೀಕಪ್ಪ ಎನ್ನುವವರು ಸದರಿ ವಾಹನದ ಮಾಲೀಕರು ಎಂದರೆ ನನಗೆ ಗೊತ್ತಿಲ್ಲ. ಚಾಲನಾ ಪರವಾನಿಗೆ ಇಲ್ಲದ ವ್ಯಕ್ತಿಗೆ ವಾಹನ ಚಲಾಯಿಸಲು ನೀಡಿದ್ದಾರೆ ಎಂದು ಟೀಕಪ್ಪ ರವರ ವಿರುದ್ಧ ಪೋಲೀಸರು ಆರೋಪ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಮಂಗಳೂರು ನ್ಯಾಯಾಲಯದಲ್ಲಿ ನನ್ನ ವಿರುದ್ಧ ಕೂಡಾ ಕ್ರಿಮಿನಲ್ ಪ್ರಕರಣ ದಾಖಲಾಗಿದ್ದು, ನಾನು ಅದರಲ್ಲಿ ತಪ್ಪು ಒಪ್ಪಿಕೊಂಡು ದಂಡ ಪಾವತಿಸಿದ್ದೇನೆ ಎಂದರೆ ಸರಿ. ಅಪಘಾತವು ನನ್ನ ನಿರ್ಲಕ್ಷ್ಯತನದಿಂದ ಆಗಿದೆ

ಎಂದರೆ ಸರಿಯಲ್ಲ. ಪರಿಹಾರ ಪಡೆಯುವ ಉದ್ದೇಶದಿಂದ ಎದುರುದಾರರ ವಿರುದ್ಧ ಐ.ಎಂ.ವಿ. ಕಾಯ್ದೆ ಕಲಂ 164 ರ ಅಡಿಯಲ್ಲಿ ಅರ್ಜಿ ಸಲ್ಲಿಸಿದ್ದೇನೆ ಎಂದರೆ ಸರಿ. ಸದರಿ ಕಲಂ ಅಡಿಯಲ್ಲಿ ಅರ್ಜಿ ಸಲ್ಲಿಸಿದ್ದರೂ ಸಹಾ, ಪರವಾನಿಗೆ ಇಲ್ಲದೆ ವಾಹನ ಚಲಾಯಿಸಿ ವಿಮಾ ಪಾಲಿಸಿಯ ಶರತ್ತುಗಳನ್ನು ಉಲ್ಲಂಘಿ ಸಿರುವ ಕಾರಣ ನಾನು ಯಾವುದೇ ಪರಿಹಾರಕ್ಕೆ ಅರ್ಹನಲ್ಲ ಎಂದರೆ ಸರಿಯಲ್ಲ.

ಅಪಘಾತದಿಂದ ನನ್ನ ಬಲಕೈ ಮತ್ತು ಬಲಗಾಲಿಗೆ ಮೂಳೆ ಮುರಿತಗಳಾಗಿರುತ್ತದೆ. ನಾನು ಕೆ.ಎಂ.ಸಿ ಮಂಗಳೂರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೇನೆ. ಡಾ. ಆತ್ಮಾನಂದ ಹೆಗ್ಡೆಯವರು ನನ್ನ ಕೈಗೆ ಮತ್ತು ಸೊಂಟಕ್ಕೆ ಮತ್ತು ಬಲಗಾಲಿಗೆ ಶಸ್ತ್ರ ಚಿಕಿತ್ಸೆ ಮಾಡಿರುತ್ತಾರೆ. ನಾನು 13 ದಿನ ಒಳರೋಗಿಯಾಗಿ ದಾಖಲಾಗಿದ್ದೇನೆ. ಆ ಸಮಯದಲ್ಲಿ ನನ್ನ ಹೆಂಡತಿ ನನ್ನನ್ನು ನೋಡಿಕೊಂಡಿರುತ್ತಾರೆ. ನಾನು ವಾಹನ ಬಾಡಿಗೆಗಾಗಲೀ, ಪೌಷ್ಟಿಕ ಆಹಾರಕ್ಕಾಗಲೀ, ಪರಿಚಾರಕರ ಭತ್ಯೆಗಾಗಲೀ ಹಣ ಖರ್ಚು ಮಾಡಿಲ್ಲ ಎಂದರೆ ಸರಿಯಲ್ಲ. ಎಲ್ಲಾ ವಿಚಾರಗಳು ನನ್ನ ಹೆಂಡತಿಗೆ ತಿಳಿದಿರುತ್ತದೆ. ಹೊರರೋಗಿಯಾಗಿ ಚಿಕಿತ್ಸೆ ಪಡೆದ ಬಗ್ಗೆ ನನ್ನ ಬಳಿ ದಾಖಲೆ ಇರುವುದಿಲ್ಲ.

ನಾನು ಡ್ರೈವಿಂಗ್ ಕೆಲಸ ಮಾಡುತ್ತಿದ್ದೆ. ಡ್ರೈವಿಂಗ್ ಗೆ ಕರೆದಾಗ ಮಾತ್ರ ನನಗೆ ದಿನಕ್ಕೆ 350 ರೂಗಳನ್ನು ನೀಡುತ್ತಿದ್ದರು. ನಾನು ಬೇರೆ ಯಾವುದೇ ಕೆಲಸ ಮಾಡುತ್ತಿಲ್ಲ. ನಾನು ಆದಾಯ ತೆರಿಗೆ ಪಾವತಿಸುವುದಿಲ್ಲ. ನಾನು ಈ ಪ್ರಕರಣಕ್ಕಾಗಿ ದಾಖಲೆಗಳನ್ನು ಸೃಷ್ಟಿಸಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ.

ಪರಿಹಾರ ಪಡೆಯುವ ಸಲುವಾಗಿ ದಾಖಲೆಗಳನ್ನು ಸೃಷ್ಟಿಸಿ ಹಾಜರುಪಡಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಕೇಳಿರುವ ಪರಿಹಾರಕ್ಕೆ ಅರ್ಹನಲ್ಲ ಎಂದರೆ ಸರಿಯಲ್ಲ. ಅಪಘಾತದಿಂದ ನನಗೆ ಯಾವುದೇ ಶಾಶ್ವತ ಅಂಗನ್ಯೂನತೆ ಆಗಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

(ಸಾಕ್ಷಿಯ ಹೇಳಿಕೆಯಂತೆ ನಾನು ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನ ನೀಡಿದ್ದು, ಅದರಂತೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಇದೆ

Sd/-

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎಎಂಎಸಿಟಿ.,

ಕಾರ್ಕಳ.